ಇನ್ನು ಎರಡನೆಯದಾಗಿ ಬಸ್ಸುಗಳದ್ದು ಸಮಸ್ಯೆ ಎಲ್ಲಿದೆ ಅಲ್ಲಿ ಬಸ್ಸುಗಳನ್ನು ಒದಗಿಸುವುದಕ್ಕೆ ನಾವು ತಯಾರಾಗಿದ್ದೇವೆ ಏನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದರೆ ಮಾನ್ಯ ರಮೇಶ್‌ಕುಮಾರ್‌ರವರು, ಹಿರಿಯ ಸದಸ್ಯರ ಏನು ಕೆಲವು ಸಮಸ್ಯೆಗಳನ್ನು ಹೇಳಿದ್ದಾರೆ, ಅದರ ಬಗ್ಗೆ ತಕ್ಷಣ ಅವರ ಜೊತೆಯಲ್ಲಿ ಸದನ ನಡೆಯುವಂತಹ ಸಂದರ್ಭದಲ್ಲಿಯೇ ಮಾತನಾಡುತ್ತೇನೆ. ಆ ತರಹ ಏನಾದರೂ ಇದ್ದರೆ. ಪ್ರೈವೇಟ್‌ನವರಿಗೆ ಕೊಟ್ಟಿರುವಂತಹ ಪರ್ಮಿಟ್ ವಿತ್‌ಡ್ರಾ ಮಾಡಿ, ನಾವೂ ಅಲ್ಲಿ ಬಸ್ಸುಗಳನ್ನು ಕೊಡದೆ ಜನರಿಗೆ ಅನಾನುಕೂಲ ಆಗುತ್ತಿದ್ದರೆ ಅದನ್ನು ತಕ್ಷಣ ಸರಿಪಡಿಸುವುದಕ್ಕೆ ನಾವು ತಯಾರಿಸಿದ್ದೇವೆ. ಮತ್ತು ಮಾಡುತ್ತೇವೆ. ಮಾನ್ಯ ಪಾಟೀಲ್‌ರವರು ಏನು ಹೇಳುತ್ತಿದ್ದಾರೆ, ಅವರ ಕಡೆ ಬಸ್‌ಸ್ಟಾಂಡ್ ಉದ್ಘಾಟನೆ ಮಾಡಿ ಅಲ್ಲಿ ಎಲ್ಲಾ ಕೆಲಸ ಮುಗಿಸಿ, ಅಲ್ಲಿಗೆ ಬಸ್ ಹೋಗದೆ ಬೇರೆ ಕಡ ಬಸ್ಸು ಹೋಗತಕ್ಕಂಥಾದ್ದು ಸೂಕ್ತವಲ್ಲ. ಅದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು ನಾಳೆಯಿಂದಲೇ ಆ ಸ್ಟಾಂಡ್‌ಗೆ ಬಸ್ಸುಗಳು ಹೋಗುವಂತಹ ಕೆಲಸವನ್ನು ಮುಂದುವರೆಸಬೇಕಾಗುತ್ತದೆ. ಅದರ ಬಗ್ಗೆ ಏನಾದರೂ ವ್ಯತ್ಯಾಸವಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ವಾಟಾಳ್ ನಾಗರಾಜ್ ಕೇಳಿ. ಆ ಪ್ರಶ್ನೋತ್ತರ ಮುಗಿದಿದೆ. ಈಗ ಶ್ರೀನಿವಾಸ ಗೌಡರೇ ಕುಳಿತುಕೊಳ್ಳಿ, ಪ್ರಶ್ನೋತ್ತರದಲ್ಲಿ ಈ ತರಹ ಮಾಡುವುದಕ್ಕಾಗುವುದಿಲ್ಲ.

ಶ್ರೀಕೆ.ಶ್ರೀನಿವಾಸ ಗೌಡ : ಪೊಲೀಸ್‌ನವರೇ ಪರ್ಮಿಟ್ ಕೊಟ್ಟಿದ್ದಾರೆ. ಇವರದ್ದು ಯಾವುದೂ ಪರ್ಮಿಷನ್ ಬೇಡ. ಪೊಲೀಸ್ ಎಂದೇ ಅವರು ಓಡಿಸುತ್ತಾರೆ.

ಸರೋಜಿನಿ ಮಹಿಷಿ ವರದಿ ಹಾಗೂ ವಾಟಾಳ್ ನಾಗರಾಜ್‌ರವರ ಗಡಿನಾಡ, ಅಧ್ಯಯನ ಸಮಿತಿ ವರದಿಗಳ ಮೇಲೆ ಕೈಗೊಂಡ ಕ್ರಮಗಳು.

(7) 117. ಶ್ರೀ ವಾಟಾಲ್ ನಾಗರಾಜ್ (ಚಾಮರಾಜನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸರೋಜಿನಿ ಮಹಿಷಿ ವರದಿ ಹಾಗೂ ವಾಟಾಳ್‌ನಾಗರಾಜ್‌ರವರ ಗಡಿನಾಡು ಅಧ್ಯಯನ ಸಮಿತಿ ವರದಿಗಳು ಸರ್ಕಾರದ ಕೈಸೇರಿ ಎಷ್ಟು ವರ್ಷಗಳಾಗಿವೆ;

ಆ) ಸದರಿ ವರದಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಮೇಲ್ಕಂಡ ವರದಿಗಳನ್ನು ಸರ್ಕಾರ ಎಂದಿನಿಂದ ಅನುಷ್ಠಾನ ಗೊಳಿಸುತ್ತಿದೆ;

ಈ) ಗಡಿನಾಡಿನ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಸರೋಜಿನಿ ಮಹಿಷಿ ವರದಿಯನ್ನು ದಿನಾಂಕ:30–12–1986ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ವಾಟಾಳ್ ನಾಗರಾಜ್‌ರವರ ಗಡಿನಾಡು ಅಧ್ಯಯನ ಸಮಿತಿಯ ಮಧ್ಯಂತರ ವರದಿಯನ್ನು ದಿನಾಂಕ 18.08.2000 ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಆ) ಸರೋಜಿನಿ ಮಹಿಷಿ ವರದಿಯ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ಅನುಬಂಧ–1ರಲ್ಲಿ ವಿವರಿಸಲಾಗಿದೆ. ಗಡಿನಾಡು ಅಧ್ಯಯನ ಸಮಿತಿಯ ವರದಿಯ ಮೇಲೆ ಕೈಗೊಂಡ ಕ್ರಮವನ್ನು ಅನುಬಂಧ–2ರಲ್ಲಿ ವಿವರಿಸಲಾಗಿದೆ.

ಇ) ಗಡಿನಾಡು ಅಧ್ಯಯನ ಸಮಿತಿಯ ವರದಿಯ ಶಿಫಾರಸ್ಸುಗಳಲ್ಲಿ ಈಗಾಗಲೇ 10 ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆ. ಉಳಿದ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಗಡಿನಾಡಿನ ಸಮಗ್ರ ಅಭಿವೃದ್ಧಿಗಾಗಿ ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿ ಈ ಕೆಳಗಿನ ಕಾಮಗಾರಿಗಳನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

1. ರಸ್ತೆ ಮತ್ತು ಸೇತುವೆ ನಿರ್ಮಾಣ
2. ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕೊಠಡಿ ನಿರ್ಮಾಣ
3. ಅಂಗನವಾಡಿ ಕಟ್ಟಡಗಳ ನಿರ್ಮಾಣ
4. ಆರೋಗ್ಯ ಕೇಂದ್ರ ಕಟ್ಟಡಗಳ ನಿರ್ಮಾಣ
5. ಪಶು ವೈದ್ಯಕೀಯ ಕಟ್ಟಡಗಳ ನಿರ್ಮಾಣ
6. ಗ್ರಾಮೀಣ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳು
7. ಗ್ರಾಮೀಣ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ವಿದ್ಯುತ್ ಸರಬರಾಜು ಯೋಜನೆಗಳು.

ಅನುಬಂಧ – 1

ಡಾ. ಸರೋಜಿನಿ ಮಹಿಷಿ ವರದಿಯಲ್ಲಿ ಒಟ್ಟು 58 ಶಿಫಾರಸ್ಸುಗಳಿದ್ದು ಇವುಗಳಲ್ಲಿ 45 ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿದೆ. ಈ ಶಿಫಾರಸ್ಸುಗಳನ್ನು ಕೆಳಕಂಡ ಇಲಾಖೆಗಳು ಜಾರಿಗೊಳಿಸಬೇಕಾಗಿದೆ.

(1) ಕಾರ್ಮಿಕ ಇಲಾಖೆ

(2) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

(3) ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮ
(4) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(5) ಕಂದಾಯ ಇಲಾಖೆ
(6) ಲೋಕೋಪಯೋಗಿ ಮತ್ತು ಕಾಡಾ ಇಲಾಖೆ
(7) ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ

ಈ ಇಲಾಖೆಗಳು ವರದಿಯ ಅನೇಕ ಶಿಫಾರಸ್ಸುಗಳನ್ನು ಜಾರಿ ಗೊಳಿಸಿವೆ. ಉಳಿದ ಶಿಫಾರಸ್ಸುಗಳು ಸತತವಾಗಿ ಜಾರಿಗೊಳ್ಳುತ್ತಿರ ಬೇಕಾದವುಗಳಾಗಿವೆ. ಅಂತಹ ಶಿಫಾರಸ್ಸುಗಳಲ್ಲಿ, ಜಾರಿಗೊಳಿಸಲು ಬಾಕಿ ಇರುವ ಶಿಫಾರಸ್ಸುಗಳ ಜಾರಿಯ ಬಗ್ಗೆ ಸಂಪುಟ ಉಪ ಸಮಿತಿಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:27–01–2005 ರಂದು ರಚಿಸ ಲಾಗಿರುತ್ತದೆ.

ಅನುಬಂಧ–2

ಶ್ರೀ ವಾಟಾಳ್ ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ನೇಮಿಸಲಾದ 'ಗಡಿನಾಡ ಅಧ್ಯಯನ ಆಯೋಗವೆಂಬ ಏಕ ಸದಸ್ಯ ಆಯೋಗವು ತನ್ನ ಮಧ್ಯಂತರ ವರದಿಯನ್ನು ದಿನಾಂಕ:18.8.2000ರಂದು ಸರ್ಕಾರಕ್ಕೆ ಸಲ್ಲಿಸಿತು. ಆ ನಂತರ ಈ ಮಧ್ಯಂತರ ವರದಿಯ ಶಿಫಾರಸ್ಸುಗಳನ್ನು ಪರಿಶೀಲಿಸಲು ಹಾಗೂ ಸದರಿ ಆಯೋಗದ ಕೆಲಸಗಳನ್ನು ಮುಂದುವರಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ವಹಿಸಿಕೊಟ್ಟು, ದಿನಾಂಕ 31.3.2001ರಲ್ಲಿ ಸರ್ಕಾರವು ಆದೇಶ ಹೊರಡಿಸಿತು. ಈ ಸಮಿತಿಯ ವಾಟಾಳ್ ನಾಗರಾಜ್ ಸಮಿತಿಯ ವರದಿಯನ್ನು ಪರಿಗಣಿಸಿ. ಅದರಲ್ಲಿನ ಅಂಶಗಳನ್ನು ಒಳಗೊಂಡಂತೆ, ಮಾರ್ಚ್ 2002ದಲ್ಲಿ ತನ್ನ ಅಂತಿಮ ವರದಿಯನ್ನು ನೀಡಿತು. ಈ ವರದಿಯಲ್ಲಿ ಒಟ್ಟು 33 ಶಿಫಾರಸ್ಸುಗಳು ಇದ್ದು, ಅವುಗಳನ್ನು ಜಾರಿಗೆ ತರುವ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರವು ರಚಿಸಿತು. ಈ ಸಮಿತಿಯು ಅನೇಕ ಸಭೆಗಳನ್ನು ನಡೆಸಿ, ಸದರಿ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ ಸಂಬಂಧಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿ ಪಡೆಯಿತು. ವರದಿಯಲ್ಲಿದ್ದ 10 ಶಿಫಾರಸ್ಸುಗಳನ್ನು ವಿವಿಧ ಇಲಾಖೆಗಳು ಇಲಾಖಾ ಮಟ್ಟದಲ್ಲಿ ಜಾರಿಗೊಳಿಸಿರುವುದನ್ನು ಪರಿಗಣಿಸಿದ ಸಮಿತಿಯು, ಉಳಿದ 23 ಶಿಫಾರಸ್ಸುಗಳನ್ನು ಜಾರಿಗೊಳಿಸಲು ಸಚಿವ ಸಂಪುಟದ ಆದೇಶ ಬೇಕಾಗಿರುವುದರಿಂದ, ಸಚಿವ ಸಂಪುಟದ ಕರಡು ಟಿಪ್ಪಣಿಯನ್ನು ತಯಾರಿಸಲು ಸೂಚಿಸಿತು. ಅದರಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂತಹ ಪ್ರಶ್ನೆಗಳು ಮೊದಲನೆಯದು ಸರೋಜಿನಿ ಮಹಿಷಿ ವರದಿ ಜಾರಿ ಬಗ್ಗೆ, ಮತ್ತೊಂದು ನಾನೇ ಕೊಟ್ಟಿರುವಂತಹ ವಾಟಾಳ್ ನಾಗರಾಜ್ ವರದಿಯ ಬಗ್ಗೆ, ನಾನು ಈ ಸರ್ಕಾರವನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಸರೋಜಿನಿ ಮಹಿಷಿ ವರದಿಯನ್ನು ಕೊಟ್ಟು 20 ವರ್ಷಗಳು ಆಯಿತು. ಇದನ್ನು ದಿ:30.12.1986ರಲ್ಲಿ ಕೊಟ್ಟಿದ್ದು, ವಾಟಾಳ್ ನಾಗರಾಜ್ ವರದಿಯನ್ನು ದಿ:18.8.2000ರಲ್ಲಿ ಕೊಟ್ಟದ್ದು ಅಂದರೆ ವರದಿಯನ್ನು ಕೊಟ್ಟು 4 ವರ್ಷಗಳು ಆಯಿತು. ಅಂದರೆ ಒಂದು ವರದಿಗೆ 20 ವರ್ಷಗಳು ಮತ್ತೊಂದಕ್ಕೆ 4 ವರ್ಷಗಳು ಆಗಿವೆ. ಇಲ್ಲಿ ಅವರು ಪ್ರತಿ ಸಲ ಏನು ಉತ್ತರವನ್ನು ಕೊಡುತ್ತಿದ್ದಾರೆ. ಅದು ಕಳೆದ 20 ವರ್ಷಗಳಿಂದ ಏನು ಉತ್ತರವನ್ನು ಕೊಡುತ್ತಿದ್ದಾರೊ ಅದೇ ಉತ್ತರ ಈಗಲೂ ಬಂದಿದೆಯೇ ಹೊರತು ಬೇರೆ ಉತ್ತರ ಬಂದಿಲ್ಲ. ಆದುದರಿಂದ ನಾನು ತಮಗೆ ಹೇಳುವುದೇನೆಂದರೆ, ಸರೋಜಿನಿ ಮಹಿಷಿ ಬೇರೆ ಉತ್ತರ ಬಂದಿಲ್ಲ. ಆದುದರಿಂದ ನಾನು ತಮಗೆ ಹೇಳುವುದೇನೆಂದರೆ, ಸರೋಜಿನಿ ಮಹಿಷಿ ವರದಿಯ ಮೇಲೆ, ಸರ್ಕಾರದವರು ಕೊಟ್ಟಿರುವ ಉತ್ತರದ ಪ್ರಕಾರ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಸರೋಜಿನಿ ಮಹಿಷಿಯ ವರದಿಯಲ್ಲಿ ಒಟ್ಟು 58 ಶಿಫಾರಸ್ಸುಗಳು ಇದ್ದು, ಇವುಗಳಲ್ಲಿ 45 ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿದೆ. ಈ 45 ಶಿಫಾರಸ್ಸುಗಳು ಯಾವ ಯಾವುದನ್ನು ಅಂಗೀಕರಿಸಿದ್ದೀರಿ ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಸದನದ ಗಮನಕ್ಕೆ ತರಬೇಕು. ಎರಡನೆಯದಾಗಿ, ನಾನು ತಮಗೆ ಹೇಳುತ್ತೇನೆ, ಕಾರ್ಮಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕಂದಾಯ ಇಲಾಖೆ, ಲೋಕೋಪಯೋಗಿ ಮತ್ತು ಕಾಡಾ ಇಲಾಖೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ, ಈ ಸರ್ಕಾರಿ ಇಲಾಖೆಗಳನ್ನು ತಾವು ಹೇಳಿದ್ದೀರಿ. ಇನ್ನು ಸರ್ಕಾರೇತರ ಮಾಹಿತಿ ತಂತ್ರಜ್ಞಾನ, ನಾರಾಯಣಮೂರ್ತಿ, ಪ್ರೇಮ್‌ಜಿ, ಅವರ ಸಾಮ್ರಾಜ್ಯದಲ್ಲಿ ಇರುವಂತಹ ಸಂಸ್ಥೆಗಳು ಖಾಸಗಿ ಸಂಸ್ಥೆಗಳು, ಕರ್ನಾಟಕ ರಾಜ್ಯಕ್ಕೆ ಬಂದಿರುವಂತಹ ಹಾಗೂ ಬೆಂಗಳೂರು ನಗರದಲ್ಲೇ ಇರುವಂತಹ ಸಂಸ್ಥೆಗಳು ಖಾಸಗಿ ಸಂಸ್ಥೆಗಳು, ಕರ್ನಾಟಕ ರಾಜ್ಯಕ್ಕೆ ಬಂದಿರುವಂತಹ ಹಾಗೂ ಬೆಂಗಳೂರು ನಗರದಲ್ಲೇ ಇರುವಂತಹ ಹೊಸ ಹೊಸ ಕಾರ್ಖಾನೆಗಳು, ಬೇರೆ ಬೇರೆ ಕಡೆಗಳಲ್ಲಿ ಇರುವಂತಹ ಖಾಸಗಿ ಕಾರ್ಖಾನೆಗಳು ಇದರ ಬಗ್ಗೆ, ಈಗಾಗಲೇ ನೂರಕ್ಕೆ ತೊಂಭತ್ತೊಂಭತ್ತು ಭಾಗ ಹೊರ ರಾಜ್ಯದವರೆಲ್ಲಾ ಸೇರಿ ಕೊಂಡಿದ್ದಾರೆ. ಈಗ ನೀವು ಕನ್ನಡಿಗರಿಗೆ

ಸರೋಜಿನಿ ಮಹಿಷಿ ವರದಿಯಲ್ಲಿ ಕಡ್ಡಾಯವಾಗಿ ಯಾವ ರೀತಿಯಲ್ಲಿ ತಾವು ಕ್ರಮವನ್ನು ಕೈಗೊಳ್ಳುತ್ತೀರಿ? ತಾವು ಪ್ರಾಮಾಣಿಕವಾಗಿ ತಿಳಿಸಬೇಕು, ನಾನು ನಿಮ್ಮ ಸರ್ಕಾರ ಮಾಡಿತು, ಹಿಂದಿನ ಸರ್ಕಾರ ಎಂದು ಹೇಳದೇ, ತಾವು ಏನು ಕ್ರಮವನ್ನು ಕೈಗೊಳ್ಳುತ್ತೀರೆಂಬ ಬಗ್ಗೆ ಪ್ರಾಮಾಣಿಕವಾಗಿ ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಡಾ: ಸರೋಜಿನಿ ಮಹಿಷಿ ವರದಿಯಲ್ಲಿ 58 ಶಿಫಾರಸ್ಸುಗಳನ್ನು ಮಾಡಿದ್ದು, ಸುಮಾರು 20 ವರ್ಷಗಳಿಂದ ಈ ವರದಿಯ ಬಗ್ಗೆ ಪ್ರತಿ ಸಂದರ್ಭದಲ್ಲೂ ಚರ್ಚೆಗಳು ಏನು ಆಗುತ್ತಿವೆ, ಈ ಹೊಸ ಸರ್ಕಾರ ಬಂದಿರುವಂತಹ ಸಂದರ್ಭದಲ್ಲಿ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ನಮ್ಮಿಂದ ಪ್ರಾಮಾಣಿಕವಾದ ಉತ್ತರವನ್ನು ತಮ್ಮ ಮುಖಾಂತರ ಬಯಸಿದ್ದಾರೆ. ಈ ವಿಷಯದಲ್ಲಿ ಕೆಲವು ಇಲಾಖೆಗಳು ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ, 45 ಶಿಫಾರಸ್ಸುಗಳ ಬಗ್ಗೆ, ಅದರಲ್ಲಿ ಕಾರ್ಮಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕಂದಾಯ ಇಲಾಖೆ, ಈ ಇಲಾಖೆಗಳಲ್ಲಿನ ಹಲವಾರು ವಿಷಯಗಳನ್ನು, ಸರ್ಕಾರ ಜಾರಿಗೊಳಿಸಲು ಶಿಫಾರಸ್ಸು ಮಾಡಿದೆ. ಇನ್ನು ಕೆಲವು ವಿಷಯಗಳನ್ನು, ಜಾರಿಗೊಳಿಸುವುದಕ್ಕೆ ಹಿಂದಿನ ಸರ್ಕಾರ "ಉಪ ಸಮಿತಿ" ಯನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಾಡಿದ್ದರು. ಈ ವರದಿಯನ್ನು ಕೊಟ್ಟು 20 ವರ್ಷಗಳು ಆಗಿವೆ. ಆ 20 ವರ್ಷಗಳಿಗೂ, ಈಗಲೂ ಯಾವ ಅಂತರದಲ್ಲಿ ಈ ಕಾರ್ಯಕ್ರಮವನ್ನು ನಿರ್ವಹಿಸುವಂಥಾದ್ದಕ್ಕೆ ಹೊಸ ನೀತಿಯನ್ನು ತರಬೇಕಾಗುತ್ತದೆ. ಅದರ ಜೊತೆಗೆ ತಾವು ಅಧ್ಯಕ್ಷರಾಗಿದ್ದಾಗ ಕೊಟ್ಟಿರುವಂತಹ ವರದಿ, ಹಾಗೂ ತಾವು ರಾಜೀನಾಮೆಯನ್ನು ಕೊಟ್ಟ ನಂತರ ಕನ್ನಡ ಪ್ರಾಧಿಕಾರದ ಅಧ್ಯಕ್ಷರಾಗಿದ್ದಂತಹ ಶ್ರೀ ಬರಗೂರು ರಾಮಚಂದ್ರಪ್ಪನವರು ಮುಂದುವರೆಸಿ, ಸುಮಾರು 33 ವರದಿಗಳನ್ನು ಕೊಟ್ಟಿದ್ದಾರೆ. ಪ್ರಮುಖವಾಗಿ ಗಡಿನಾಡ ಭಾಗಗಳಲ್ಲಿ ಆಗಬೇಕಾಗಿರುವಂತಹ ಕೆಲಸಗಳು ಏನು ಆಗಬೇಕಾಗಿದೆ, ಅದರ ಬಗ್ಗೆ ಹಿಂದಿನ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ. ಈ ವಿಷಯಗಳ ಬಗ್ಗೆ ನಮ್ಮ ಸರ್ಕಾರದ ನೀತಿಗಳು ಏನು? ಎಂಬುದನ್ನು ಮುಂದಿನ ದಿವಸಗಳಲ್ಲಿ ಪ್ರಕಟಗೊಳಿಸುತ್ತೇನೆ. ಇದನ್ನು ಜಾರಿಗೆ ತರುವಂಥಾದ್ದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಈ ವಿಷಯದಲ್ಲಿ ಸರ್ಕಾರ ಬದ್ದವಾಗಿದೆ. ಈ ಸರೋಜಿನಿ ಮಹಿಷಿ ವರದಿ ಹಾಗೂ ತಾವು ಮತ್ತು ಬರಗೂರು ರಾಮಚಂದ್ರಪ್ಪನವರು ಕೊಟ್ಟಿರುವಂತಹ ವರದಿಯನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತೇವೆಂದು ಹೇಳಬಯಸುತ್ತೇನೆ.